1	2	3	4	5	6
ಗ್ರಾಮ ಪಂಚಾಯತ್	336.99	277.82	82.44	59.17	17.56
ಒಟ್ಟು	4692.42	4354.95	92.81	337.47	7.19

ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಆಯಾಗಳಿಗೆ ಬೇಸಿಗೆ ರಜೆ ವೇತನ ಸೌಲಭ್ಯವನ್ನು ವಾಪಸ್ಸು ಪಡೆದಿರುವುದು

4084 (4583) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳಿದ್ದು ಹಾಗೂ ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಆಯಾಗಳ ಬೇಸಿಗೆ ರಜೆ ವೇತನ ಸೌಲಭ್ಯ ವಾಪಾಸ್ಸು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ವಾಪಾಸ್ಸು ಪಡೆಯಲು ಕಾರಣವೇನು;

ಇ) ತಿಂಗಳೊಂದರ ಸಂಚಿತವಾಗಿ ರೂ. 600.00 ಪಡೆಯುವ ಮಹಿಳಾ ಆಯಾಗಳ ಶೋಷಣೆ ಮಾಡಿದಂತೆ ಆಗಿಲ್ಲವೇ; ಸರ್ಕಾರ ಪುನರ್ ಪರಿಶೀಲನೆ ಮಾಡಿ ಬೇಸಿಗೆ ರಜೆ ವೇತನ ಪಾವತಿಸಲು ಆದೇಶ ಹೊರಡಿಸಿ ತಡೆಹಿಡಿಯಲಾದ ವೇತನವನ್ನು ಮರುಪಾವತಿ ಮಾಡಲಾಗುವುದೆ;

ಈ) ಆಯಾಗಳಿಗೆ ಪ್ರಾಥಮಿಕ ಶಾಲೆಯಲ್ಲಿ ಎಷ್ಟು ಅವಧಿ ಕೆಲಸ ನಿರ್ವಹಿಸಲು ಸಮಯ ನಿಗದಿಪಡಿಸಲಾಗಿದೆ?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು):

ಅ) ಹೌದು

ಆ) ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆಯಾಗಳಿಗೆ ಬೇಸಿಗೆ ರಜೆ ವೇತನವನ್ನು ನೀಡಲು ಅನುಮತಿ ನೀಡಲಾಗಿತ್ತು. ಆದರೆ ಆರ್ಥಿಕ ಹೊರೆಯನ್ನು ಗಮನಿಸಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಅವರು ಸದರಿ ಆದೇಶವನ್ನು ರದ್ದು ಪಡಿಸಿರುತ್ತಾರೆ.

ಇ) ಆಯಾಗಳನ್ನು ಯಾವುದೇ ವೃಂದ ಮತ್ತು ನೇಮಕಾತಿ ನಿಯಮಗಳ ಮೇರೆಗೆ ನೇಮಕಾತಿ ಆಗಿರುವುದಿಲ್ಲ. ಇವರ ನೇಮಕಾತಿಗೆ ಯಾವುದೇ ವಿದ್ಯಾರ್ಹತೆ ಹೊಂದಿರಬೇಕೆಂಬ ನಿಯಮವಿರುವುದಿಲ್ಲ.

ಆಯಾಗಳು ಮಾಸಿಕ ಗೌರವಧನ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು, ಅವರುಗಳಿಗೆ ಯಾವುದೇ ವೇತನ ಶ್ರೇಣಿಯಲ್ಲಿ ವೇತನ ನಿಗದಿ ಪಡಿಸಿ ವೇತನ ಪಾವತಿಸುತ್ತಿಲ್ಲ. ಬೇಸಿಗೆ ರಜೆಯಲ್ಲಿ ಶಾಲೆಗಳು ಮುಚ್ಚಿರುವುದರಿಂದ ಇವರಿಗೆ ಕೆಲಸವಿರುವುದಿಲ್ಲ. ಆದ್ದರಿಂದ ಇವರಿಗೆ ಬೇಸಿಗೆ ರಜೆ ವೇತನ ನೀಡಲು ಬರುವುದಿಲ್ಲ.

ಈ) ಪ್ರಸ್ತುತ ಆಯಾಗಳಿಗೆ ಪ್ರತಿ ದಿನ ಪೂರ್ವಾಹ್ನ ಶಾಲೆಯನ್ನು ಶುಚಿಗೊಳಿಸುವುದು ಮತ್ತು ಶಾಲೆಗೆ ಬಾರದ ಮಕ್ಕಳನ್ನು ಶಾಲೆಗೆ ಕರೆತರುವ ಕೆಲಸ ಮಾತ್ರ ವಹಿಸಲಾಗಿದೆ.